ತಾರೀಖು 16ನೆ ಮಾರ್ಚ 1907.

ನಂ. ಜಿ. 5651—ಜೆ. ಎಂ. 201-06—8, ಸೋ॥ 1894ನೆಯ ವರ್ಷದ 7ನೆಯ ನಂಬ್ರ ಲ್ಯಾಂಡ್ ಅಕ್ವಿಸಿಶನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತು ಸರ್ಕಾರಿ ಕೆಲಸಕ್ಕೆಂ ಎಂದರೆ, ಕೊಲಾರದಲ್ಲಿ ಬರೆದು ರವಿನ್ಯೂ ಸರ್ವೆ ಜೆನರಲ್ ಆಫೀಸಿಗೆ ಸ್ಥಳವರ್ಜಿಸುವುದಕ್ಕೆ ಅವಶ್ಯಕವಾಗಿದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡಿಪ್ಯುಟಿ ಕಮಿಷನರಿಗೆ ಸದರೀ ಸ್ವತ್ತನ್ನು ಹೊಂದುವುದಕ್ಕೆ—ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಖಾತೆ ನಂಬರು.	ವಿವರಣೆ	ಅಳತೆಗಳು. ಉದ್ದ (ಅಡಿಗಳು)	ಅಗಲ (ಅಡಿಗಳು)	ಒಟ್ಟು ಚದರ ಗಜಗಳು.	ಚತುರ್ಗಡಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಕೋಲಾರ	ಕೋಲಾರ	ಕೋಲಾರ	ವಿ॥ ಹೆನ್ರಿ		ನಿವೇಶನ	312	208	7210 2/9	ಡಿಪ್ಟಿ ಕಮಿಷನರ ಬಂಗಲೆಯ ರಸ್ತೆ	ಮ್ಯುನಿಸಿಪಲ್ ಹಳೆಬಜಾರ್ ಮತ್ತು ಸಂಜೀವರಾಯನ ಖಾತೆ ಜಮೀನು ನಂಬ್ರ 986.	ಕೋಲಾರ-ಸೋಮಕುಪ್ಪದ ರಸ್ತೆ	ಕೋಲಾರದ ಕೆರೆಯಿಂದ ನಾಲೆ.
					ಅದರ ಮಧ್ಯದಲ್ಲಿ ತಾರಿಸಿಯು ಮತ್ತು ಹೆಂಚಿನ ಮೇಲ್ಛಾವಣಿಯುಳ್ಳ ಬಂಗಲೆ	56	37	230 2/9				

ತಾರೀಖು 26ನೆ ಮಾರ್ಚ 1907.

ನಂ. ಜೆ. 3019—ಪೋಲೀಸ್ 142—06—6, ಪೊಲೀಸನರಿ ಪೊಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ವಿ॥ ಮಿರ್ಜಾ ಮಹಮದ್ ಇಸ್ಮಾಯಿಲ್, ಬಿ. ಎ., ಯವರು, ತಮಗೆ 1907ನೆ ಇಸವಿಯ ಮಾರ್ಚಿ ಮೊದಲನೆ ತಾರೀಖಿನ ಜೆ. 2655-ಪೋಲೀಸ್ 142—06—4 ನಂಬರಿನ ಇನ್ಸ್ಪೆಕ್ಷಾರ್ಮೆಯಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು, ಸದರೀ ತಾರೀಖಿನ ಪೂರ್ವಾಹ್ನದಿಂದ ಉಪಯೋಗಿಸಿಕೊಂಡು ಅದೇ ತಿಂಗಳು 12ನೆ ತಾರೀಖಿನ ಪೂರ್ವಾಹ್ನದಲ್ಲಿ ಪುನಃ ಕೆಲಸದಮೇಲೆ ಬಂದುದರಿಂದ ರಜಾದಲ್ಲಿ ಅವರು ಉಪಯೋಗಿಸಿಕೊಳ್ಳದೆ ಉಳಿದ ಭಾಗವನ್ನು ಇದರಿಂದ ರದ್ದುಮಾಡಿದೆ.

ತಾರೀಖು 9ನೆ ಮಾರ್ಚ 1907.

ನಂ. ಆರ್. 207—ಎಲ್. ಆರ್. 470-06—3, ಸೋ॥ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಶನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆಂ ಎಂದರೆ, ಗುಂಡ್ಲುಪೇಟೆ ತಾಲ್ಲೂಕಿನ ಕೋಟೆಕೆರೆ ಗ್ರಾಮದ ದಾಖಾ ಬೋಗಯ್ಯನ ಹುಂಡಿ ಗ್ರಾಮದ ನಿವೇಶನದ ಬದಲಾವಣೆಯ ಬಗ್ಗೆ ಅವಶ್ಯಕವಾಗಿದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂ.	ಖುಷ್ಕಿ ತರಿ ಅಥವಾ ಬಾಗಾಯತು.	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ	ಕಂದಾಯ	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಗುಂಡ್ಲುಪೇಟೆ	ಬೇಗೂರು	ಕೋಟೆಕೆರೆ	(1) ಬಸವಗೌಡ (2) ಮಾಪಗೌಡ	60	ಖುಷ್ಕಿ	ಎ. 3	ರೂ. 2	ಎ. 1	ಆ. 11	ಸರ್ವೆ 66ನೆ ನಂಬರಿನ ಭಾಗ	ಗ್ರಾಮಸುಣ್ಣ	ಸರ್ವೆ 65ನೆ ನಂಬರ್	ಸರ್ವೆ 61ನೆ ನಂಬರ್